ಮೂಲ ದಾವಾ ಃ 142-2016 ಪಿಡಬ್ಲು-1

ಸಾಕ್ಷಿಯನ್ನು ದಿನಾಂಕಃ 04.01.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ ವಿ ಬಿ ಎಸ್ ವಕೀಲರಿಂದ ಃ

ದಿಃ 13.04.2017ರ ಮೂಲ ಕ್ರಯ ಪತ್ರವನ್ನು ನಿಪಿ 5 ಅಂತ, ಒಟ್ಟು 5 ಪೋಟೋಗಳು ಒಂದು ಸಿಡಿಯನ್ನು ನಿಪಿ 6 ರಿಂದ 11 ಅಂತ ಗುರುತಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಸ್ ಪಿ ವಕೀಲರಿಂದ

ನಮ್ಮ ಮನೆಯ ನಂಬರ್ 81, ಇದನ್ನು ಬಸವಣ್ಣೆಪ್ಪ ನಾಗಪ್ಪ ಮುಳಗುಂದ ರವರಿಂದ ಖರೀದಿಗೆ ಹಿಡಿಯಲಾಯಿತು. ನನ್ನ ತಂದೆ ನಂ.81 18*67 ಅಳತೆಯ ಪೂರಾ ಆಸ್ತಿಯನ್ನು ಬಸವಣ್ಣೆಪ್ಪ ಮುಳಗುಂದ ರವರಿಂದ ಖರೀದಿಗೆ ಹಿಡಿದಿದ್ದಾರೆ. ಮುಳಗುಂದ ಆಸ್ತಿಯನ್ನು ಬಿಟ್ಟು ನನ್ನ ತಂದೆ ಬೇರೆ ಯಾರ ಆಸ್ತಿಯನ್ನು ಖರೀದಿಗೆ ಪಡೆದಿಲ್ಲ. ಮುಳಗುಂದರವರ 2 ಹಿಸ್ಸೆ ಪೈಕಿ ನನ್ನ ತಂದೆ ಅವರ 1 ಹಿಸ್ಸೆಯನ್ನು ಖರೀದಿಗೆ ಹಿಡಿದಿದ್ದಾರೆ. ಮುಳಗುಂದರವರ ಇನ್ನೊಂದು ಹಿಸ್ಸೆಯನ್ನು ಮಹದೇವಪ್ಪ ಶೆಟ್ಟಣ್ಣರವರು ಖರೀದಿಗೆ ಹಿಡಿದಿದ್ದಾರೆ, ಅದರ ಕ್ಷೇತ್ರ ನನಗೆ ಗೊತ್ತಿಲ್ಲ. ನಾವು ಖರೀದಿ ಹಿಡಿದ 18*67 ಮೊಳ ಜಾಗವನ್ನು ನಾವೇ ವಹಿವಾಟು ಮಾಡುತ್ತಿದ್ದೇವೆ ಅಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ.

ನನ್ನ ಮನೆಯ ಪೂರ್ವಕ್ಕೆ ಮಹದೇವಪ್ಪ ಶೆಟ್ಟಣ್ಣರವರ ಮನೆ ಇದೆ, ಪಶ್ಚಿಮಕ್ಕೆ ತಿಪ್ಪಣ್ಣ ದುಂಡೀರವರ ಆಸ್ತಿ ಇದೆ. ನನ್ನ ಪ್ರಕಾರ ತಿಪ್ಪಣ್ಣ ದುಂಡೀರವರ ಅಸ್ತಿಯ ನಂತರ ಧರ್ಮೋಜಿರವರ ಅಸ್ತಿ ಇದೆ ಅಂದರೆ ಸರಿ. ನಮ್ಮ ಹಾಗೂ ಧರ್ಮೋಜಿರವರ ನಡುವೆ ಯಾವುದೇ ತಂಟೆ ತಕರಾರು ಇರಲಿಲ್ಲ ಅಂದರೆ ಸಾಕ್ಷಿಯು ಈಗ ತಂಟೆ ಇದ್ದುದರಿಂದ ನ್ಯಾಯಾಲಯಕ್ಕೆ ಬಂದಿದ್ದೇನೆ ಅಂತ ನುಡಿಯುತ್ತಾರೆ. ತಿಪ್ಪಯ್ಯ, ಸಂಗಯ್ಯ, ಸಿದ್ದಯ್ಯರವರು ಮೂರು ಮಂದಿ ಅಣ್ಣ-ತಮ್ಮಂದಿರು ಅಂದರೆ ಸರಿ. ಅವರ ಮನೆಯ ನಂ 79 ಅಂದರೆ ಸರಿ. ಅದನ್ನು ಮೂರು ಭಾಗ ಮಾಡಿಕೊಂಡು ವಹಿವಾಟು ಮಾಡಿಕೊಡಿದ್ದಾರೆ ಅಂದರೆ ಸರಿ. ತಿಪ್ಪಯ್ಯ ಹಾಗೂ ದುಂಡೀಯವರ ನಡುವೆ ನ್ಯಾಯ ಇದ್ದ ವಿಚಾರ ನನಗೆ ಗೊತ್ತಿಲ್ಲ. ದುಂಡೀರವರ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ